ವಿತ್ತ ಸಂಚಿಕೆ
November 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಜೀವನದಲ್ಲಿ ಭೌತಿಕ ವಸ್ತುಗಳು ಅರ್ಥಹೀನ. ನಿಜಕ್ಕೂ ಬೇಕಿರುವುದು ನಿಮ್ಮ ಪ್ರೀತಿಪಾತ್ರರ ಯೋಗಕ್ಷೇಮ

–ರತನ್ ಟಾಟಾ




ಒಂದು ಕೆಲಸದಲ್ಲಿ ತಲ್ಲೀನರಾದಾಗ ಎಲ್ಲವೂ ನಿಮ್ಮನ್ನೇ ಅವಲಂಬಿಸಿದೆ ಎಂದು ಭಾವಿಸಿ. ಪ್ರಾರ್ಥನೆ ಮಾಡುವಾಗ ದೇವರಲ್ಲಿ ಲೀನರಾದ ಹಾಗೆ.


––ಜೆ.ಆರ್.ಡಿ ಟಾಟಾ

ಯಾವ ಉದ್ಯಮ ಹಣವನ್ನು ಬಿಟ್ಟು ಬೇರೇನನ್ನೂ ಮಾಡದೋ ಅದಕ್ಕಿಂತ ಕೆಟ್ಟ ಬಿಸಿನೆಸ್ ಇನ್ನೊಂದಿಲ್ಲ.

–ಹೆನ್ರಿ ಫೋರ್ಡ್



# F&O ಎಂಬ ಮಾಯಾ ಜಿಂಕೆಯ ಬೆನ್ನುಹತ್ತಿ...



**ಎಫ್&ಓ** ಟ್ರೇಡಿಂಗ್ ಬಗ್ಗೆ ಯಾವತ್ತೂ ಬಣ್ಣಬಣ್ಣದ ಕಥೆ ಕಟ್ಟಿ ಹೇಳಲಾಗುತ್ತದೆ. ಫಟಾಫಟ್ ಸಿರಿವಂತರಾಗಲು ಇರುವ ದಾರಿ ಎನ್ನುವವರೂ ಇದ್ದಾರೆ. ರಾತ್ರಿಬೆಳಗಾಗುವುದರೊಳಗೆ ಗಳಿಕೆ ಸಾಧ್ಯ ಎಂಬ ವದಂತಿಗಳನ್ನೂ ಹರಿಯಬಿಟ್ಟಿರುತ್ತಾರೆ. ಜೊತೆಗೆ ಸಾಮಾಜಿಕ ಜಾಲತಾಣಗಳ ಪ್ರಚಾರ ಬೇರೆ. ಆದರೆ ವಾಸ್ತವ ತುಂಬ ಸಂಕೀರ್ಣವಾಗಿದೆ. ಎಫ್&ಓ ಟ್ರೇಡಿಂಗ್‌ನಲ್ಲಿ ಯಶಸ್ಸಿಗೆ ಯಾವುದೇ ಗ್ಯಾರೆಂಟಿ ಸೂತ್ರವಿಲ್ಲ ಮತ್ತು ಇದರಲ್ಲಿರುವ ರಿಸ್ಕ್ ಕೂಡ ಭರಪೂರ.ಮಾರುಕಟ್ಟೆ ಪರಿಸ್ಥಿತಿ, ಏರಿಳಿತ ಮತ್ತು ವೈಯಕ್ತಿಕ ಟ್ರೇಡ್ ಮಾಡುವ ನಿರ್ಧಾರಗಳು ಫಲಿತಾಂಶದಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ.

ಎಫ್&ಓ ಟ್ರೇಡಿಂಗ್ ಸಾಮಾನ್ಯವಾಗಿ ಸಂಕೀರ್ಣವಾಗಿರುವುದರಿಂದ ಅದೊಂದು ಅಪಾಯಕಾರಿ ಸಾಹಸ. ಚಿಲ್ಲರೆ ಅಥವಾ ಸಣ್ಣ–ಪುಟ್ಟ ಹೂಡಿಕೆದಾರರಿಗೆ ಇದನ್ನು ಶಿಫಾರಸು ಮಾಡುವುದಿಲ್ಲ. ಯಾಕೆಂದರೆ ಅವ–ರಿಗೆ ಇದರಲ್ಲಿ ಇರುವ ಪರಿಕಲ್ಪನೆ ಮತ್ತು ಕಾರ್ಯತಂತ್ರಗಳ ಬಗ್ಗೆ ಆಳವಾದ ಅರಿವು ಇರುವುದಿಲ್ಲ.

ಇತ್ತೀಚೆಗೆ ಸೆಬಿ ಕೈಗೊಂಡಿರುವ ಒಂದು ಅಧ್ಯಯನದ ಪ್ರಕಾರ 2024ರ ಹಣ–ಕಾಸು ವರ್ಷದಲ್ಲಿ ಎಫ್&ಓ ವಿಭಾಗದಲ್ಲಿ ಹತ್ತರಲ್ಲಿ ಒಂಭತ್ತು ಮಂದಿ ವೈಯಕ್ತಿಕ ಹೂಡಿಕೆದಾರರು ಹಣವನ್ನು ಕಳೆದುಕೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಶೇ.91.1ರಷ್ಟು ವೈಯಕ್ತಿಕ ವಹಿವಾಟುದಾರರು ನಷ್ಟಕ್ಕೆ ಒಳಗಾಗಿದ್ದಾರೆ ಎಂಬುದು ಗಮನಾರ್ಹ. 2023ರ ಜನವರಿಯಿಂದ ನಡೆಸಲಾದ ಇನ್ನೊಂದು ಅಧ್ಯಯನದ ಪ್ರಕಾರ 2022ರ ಹಣಕಾಸು ವರ್ಷದಲ್ಲಿ ಶೇ.89ರಷ್ಟು ವೈಯಕ್ತಿಕ ಎಫ್&ಓ ವಹಿವಾಟುದಾರರು ಹಣವನ್ನು ಕಳೆದುಕೊಂಡಿದ್ದಾರೆ.

ಇನ್ನೊಂದು ಮಹತ್ವದ ಸಂಗತಿ ಎಂದರೆ ಹಣಕಾಸು ವರ್ಷ 2022ರಿಂದ 2024ರ ಅವಧಿಯಲ್ಲಿ ಎಫ್&ಓ ಟ್ರೇಡಿಂಗ್‌ನಲ್ಲಿ ಸುಮಾರು 1.13 ಕೋಟಿ ಮಂದಿ




ಹೂಡಿಕೆ ವೇಳೆ ಭಾವನೆಗಳ ಹೊಯ್ದಾಟಕ್ಕೆ ಬೇಕು ಕಡಿವಾಣ 3



ಪರಿಪೂರ್ಣ ಕಾರ್ ವಿಮೆಯ ಸಂಪೂರ್ಣ ಗುಟ್ಟು 5



ವೈಯಕ್ತಿಕ ಟ್ರೇಡರ್‌ಗಳು 1.81 ಲಕ್ಷ ಕೋಟಿ ರೂ. ಕಳೆದುಕೊಂಡಿದ್ದಾರೆ. ಹಣಕಾಸು ವರ್ಷ 2024ರಲ್ಲಿಯೇ ಉಂಟಾದ ಒಟ್ಟು ನಷ್ಟವೇ 75,000 ಕೋಟಿ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇವಲ ಶೇ.7.2 ಮಂದಿ ವೈಯಕ್ತಿಕ ಎಫ್&ಓ ಟ್ರೇಡರ್‌ಗಳು ಲಾಭ ಮಾಡಿಕೊಂಡಿದ್ದಾರೆ. ವಹಿವಾಟು ವೆಚ್ಚಗಳನ್ನು ಕಳೆದು ಕೇವಲ ಒಂದು ಲಕ್ಷ ರೂ.ಗಳಿಸಿದವರ ಪ್ರಮಾಣ ಶೇ.1 ಮಾತ್ರ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಇಷ್ಟೆಲ್ಲ ಎಫ್&ಓ ಟ್ರೇಡಿಂಗ್‌ನಲ್ಲಿ ಕೈಸುಟ್ಟುಕೊಂಡರೂ ಹೂಡಿಕೆ ಮಾಡುವುದನ್ನು ಬಿಟ್ಟಿದ್ದಾರೆಯೇ? ಖಂಡಿತವಾಗಿ ಇಲ್ಲ. ಶೇ.75ಕ್ಕೂ ಹೆಚ್ಚು ಮಂದಿ ನಷ್ಟ ಅನುಭವಿಸಿದ ಟ್ರೇಡರ್‌ಗಳು ಎಫ್&ಓ ಟ್ರೇಡಿಂಗ್‌ನ್ನು ಇನ್ನೂ ಮುಂದುವರಿಸಿದ್ದಾರೆ. ಬಹುಶಃ ಡಿರವೇಟಿವ್ ಟ್ರೇಡಿಂಗ್‌ನ ನಶೆಗೆ ಒಳಗಾಗುವುದು ಎಂದರೆ ಇದೇ ಎನ್ನಬಹುದು.

ಸೆಬಿ ಮುಂದಿಡುವ ಇನ್ನೊಂದು ಡಾಟಾ ಏನೆಂದರೆ ಆಗಸ್ಟ್ ತಿಂಗಳಲ್ಲಿ ಡಿರವೇಟಿವ್ ಟ್ರೇಡಿಂಗ್‌ನ ರಾಷ್ಟ್ರೀಯ ಮಾಸಿಕ ಮೌಲ್ಯ 10,923 ಲಕ್ಷ ಕೋಟಿ (130.13 ಟ್ರಿಲಿಯನ್ ಡಾಲರ್) ತಲುಪಿದೆ. ಇದು ಜಾಗತಿಕವಾಗಿ ಅತಿ ಹೆಚ್ಚು.ಈ ಪ್ರಕ್ರಿಯೆಯ ಇನ್ನೊಂದು ಗಮನೀಯ ಅಂಶವೇನೆಂದರೆ ಮುಖ್ಯ ಸ್ಟಾಕ್ ಸೂಚ್ಯಂಕಗಳಾದ ಬಿಎಸ್‌ಇ ಸೆನ್ಸೆಕ್ಸ್ ಮತ್ತು ಎನ್‌ಎಸ್‌ಇ ನಿಫ್ಟಿ–50 ಈ ಟ್ರೇಡಿಂಗ್‌ನಲ್ಲಿ ಒಳಗೊಂಡಿರುವುದು. ರಾಷ್ಟ್ರೀಯ ಷೇರು ಸೂಚ್ಯಂಕದಲ್ಲಿ ಇಂಡೆಕ್ಸ್ ಆಪ್ಷನ್‌ನ ಪ್ರಮಾಣವೇ ಸುಮಾರು 13 ಪಟ್ಟು ಹೆಚ್ಚಾಗಿದೆ. ಅಂದರೆ 2020 ಹಣಕಾಸು ವರ್ಷದಲ್ಲಿ 10.8 ಲಕ್ಷ ಕೋಟಿ ರೂ. ಇದ್ದಿದ್ದು ಹ.ವ. 2024ರಲ್ಲಿ 138 ಲಕ್ಷ ಕೋಟಿಗೆ ಜಿಗಿದಿದೆ. ಹಣಕಾಸು ವರ್ಷ 2024ರಲ್ಲಿ ಈ ವಹಿವಾಟು ಮಾಡಿದ ಎಫ್&ಓ ಟ್ರೇಡರ್‌ಗಳಲ್ಲಿ ಅರ್ಧಕ್ಕರ್ಧ ಮಂದಿ ಮುಖ್ಯವಾಗಿ ನಾಲ್ಕು ರಾಜ್ಯಗಳಿಂದ ಬಂದವರು ಎನ್ನುವುದು ಸ್ಪಷ್ಟ.ಅದರ ಅಂಕಿ–ಅಂಶ ಹೀಗಿದೆ; ಮಹಾರಾಷ್ಟ್ರ–18.8 ಲಕ್ಷ ಮಂದಿ ಅಥವಾ ಶೇ.21.7, ಗುಜರಾತ್–10.1 ಲಕ್ಷ ಅಥವಾ ಶೇ.11.6, ಉತ್ತರ ಪ್ರದೇಶ–9.3 ಲಕ್ಷ ಅಥ–ವಾ ಶೇ.10.7 ಮತ್ತು ರಾಜಸ್ಥಾನ–5.4 ಲಕ್ಷ ಅಥವಾ ಶೇ.6.2.

ಅತ್ಯಂತ ಕಳವಳಕಾರಿ ಸಂಗತಿ ಎಂದರೆ ಬಹಳ ದೊಡ್ಡ ಸಂಖ್ಯೆಯ ಯುವ ಹೂಡಿಕೆದಾರರು ಅತ್ಯಂತ ಅಪಾಯಕಾರಿ ಹಾಗೂ ಅತಿ ಹೆಚ್ಚು ಗಳಿಕೆಯ ಎಫ್&ಓ ಟ್ರೇಡಿಂಗ್‌ನಲ್ಲಿ ಶಾಮೀಲಾಗುತ್ತಿರುವುದು. ಸೆಬಿ ವರದಿಯ ಪ್ರಕಾರ ಕೇವಲ 30 ವರ್ಷ ವಯಸ್ಸಿನ ಟ್ರೇಡರ್‌ಗಳ ಸಂಖ್ಯೆ ಹಣಕಾಸು ವರ್ಷ 24ರಲ್ಲಿ ಶೇ.43ರಷ್ಟು ಹೆಚ್ಚಳವಾಗಿದೆ. ಇದು ಹಣ–ಕಾಸು ವರ್ಷ 23ರಲ್ಲಿ ಶೇ.31ರಷ್ಟಿತ್ತು. ಆದರೆ ಈ ಟ್ರೇಡಿಂಗ್‌ನಲ್ಲಿ ನಷ್ಟ ಅನುಭವಿಸಿದವರ ಪ್ರಮಾಣ ಶೇ.93.ಇದು ಹಣಕಾಸು ವರ್ಷ 24ರಲ್ಲಿ ಉಂಟಾದ ಒಟ್ಟಾರೆ ನಷ್ಟ ಪ್ರಮಾಣವಾದ ಶೇ.91.1ಕ್ಕಿಂತ ಅಧಿಕ. ಇದೇ ಹಣಕಾಸು ವರ್ಷದಲ್ಲಿ ಐದು ಲಕ್ಷಕ್ಕಿಂತ



ಕಡಿಮೆ ಗಳಿಸಿದವರ ಸಂಖ್ಯೆ ಶೇ.75ರಷ್ಟು.ಅಂದರೆ ಸುಮಾರು 65.4 ಲಕ್ಷ ಮಂದಿ.

ಇದಕ್ಕೆ ಪ್ರತಿಯಾಗಿ ಸೆಬಿ ಹೂಡಿಕೆದಾರರ ಭದ್ರತೆ ಮತ್ತು ಮಾರುಕಟ್ಟೆ ಸ್ಥಿರತೆಯ ದೃಷ್ಟಿಯಿಂದ ಅನೇಕ ಕ್ರಮಗಳನ್ನು ಪ್ರಸ್ತಾಪಿಸಿದೆ:

**ಹೆಚ್ಚಿದ ಕಾಂಟ್ರಾಕ್ಟ್ ಗಾತ್ರ:** ಕಾಂಟ್ರಾಕ್ಟ್ ಮೌಲ್ಯವನ್ನು 5–10 ಲಕ್ಷ ರೂ.ನಿಂದ 15–20 ಲಕ್ಷ ರೂ.ಗೆ ಏರಿಸುವ ಶಿಫಾರಸು ಮಾಡಲಾಗಿದ್ದು ಆರು ತಿಂಗಳ ಬಳಿಕ ಅದನ್ನು ಮತ್ತೆ 20–30 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಡಿರವೇಟಿವ್ ಮಾರುಕಟ್ಟೆಯಲ್ಲಿ ಭಾಗಿಯಾದ ಸಂದರ್ಭದಲ್ಲಿ ಹೂಡಿಕೆದಾರರು ಸೂಕ್ತ ರಿಸ್ಕ್ ಎದುರಿಸಲು ಶಕ್ತಿ ಬರಲಿ ಎಂಬುದು ಈ ಏರಿಕೆಯ ಉದ್ದೇಶವಾಗಿದೆ.

**ಅಧಿಕ ಮಾರ್ಜಿನ್‌ನ ಅಗತ್ಯತೆ:** ತೀವ್ರ ಸ್ವರೂಪದ ಮಾರುಕಟ್ಟೆ ಏರಿಳಿತದ ಸಂದರ್ಭದಲ್ಲಿ ಅದರಲ್ಲೂ ಮುಖ್ಯವಾಗಿ ಮಾರುಕಟ್ಟೆಯಲ್ಲಿ ಅಧಿಕ ಪ್ರಮಾಣದ ಟ್ರೇಡಿಂಗ್ ನಡೆಯುತ್ತಿದ್ದಾಗ ಹೂಡಿಕೆದಾರರನ್ನು ರಕ್ಷಿಸುವ ಸಲುವಾಗಿ ಮಾರಾಟಗಾರರಿಗೆ ಲಾಭದ ಮಾರ್ಜಿನ್‌ನ್ನು ಹೆಚ್ಚಿಸಲಾಗುತ್ತದೆ.

**ವಾರದ ಅವಧಿಯಲ್ಲಿ ಕಡಿತ:** ವಾರದ ಅವಧಿಗಳ ಕಡಿತವನ್ನು ಐದರಿಂದ ಒಂದಕ್ಕೆ ತಗ್ಗಿಸುವ ಬಗ್ಗೆ ಸೆಬಿ ಯೋಜನೆ ರೂಪಿಸಿದೆ. ಇದರಿಂದ ಎಕ್ಸ್‌ಚೇಂಜ್‌ಗಳು ತಿಂಗಳಿಗೆ ಆರು ಕಾಂಟ್ರಾಕ್ಟ್‌ಗಳಿಗೆ ಮಿತಿಗೊಳಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಊಹಾತ್ಮಕ ಟ್ರೇಡಿಂಗ್‌ನ್ನು ನಿರ್ಬಂಧಿಸಿ ವ್ಯಾಪ್ತಿಗೆ ಒಳಪಡದ ಆಪ್ಷನ್ ಮಾರಾಟದ ರಿಸ್ಕ್ ತಗ್ಗಿಸುವುದು ಉದ್ದೇಶ.

**ಇಂಟ್ರಾಡೇ ಮೇಲ್ವಿಚಾರಣೆ:** 2025ರ ಏಪ್ರಿಲ್ ಒಂದರಿಂದ ಈಕ್ವಿಟಿ ಇಂಡೆಕ್ಸ್ ಡಿರವೇಟಿವ್‌ಗಳಿಗೆ ಮಿತಿಯನ್ನು ವಿಧಿಸಲು ಸ್ಟಾಕ್ ಎಕ್ಸ್‌ಚೇಂಜ್ ಇಂಟ್ರಾಡೇ ಮೇಲ್ವಿಚಾರಣೆಯನ್ನು ಜಾರಿಗೆ ತರಲಿದೆ. ಇದರಿಂದ ಟ್ರೇಡಿಂಗ್ ಅವಧಿಗಳಲ್ಲಿ ಭಾಗಿದಾರರು ನಿಗದಿಪಡಿಸಿದ ಮಿತಿಗಳನ್ನು ಮೀರದಂತೆ ಖಾತ–ರಿಪಡಿಸಲು ಸಾಧ್ಯವಾಗುತ್ತದೆ.

ಇಂತಹ ನಿಯಂತ್ರಣಗಳನ್ನು ವಿಧಿಸುವುದ–ರಿಂದ ಡಿರವೇಟಿವ್ ಟ್ರೇಡಿಂಗ್‌ನಲ್ಲಿ ಆಗಾಗ ತೊಡಗಿಕೊಳ್ಳುವ ಚಿಲ್ಲರೆ ಹೂಡಿಕೆದಾರರಿಗೆ ಅನುಕೂಲವಾಗುತ್ತದೆ.ಈ ರೀತಿಯ ಕ್ರಮಗಳನ್ನು ಕೈಗೊಂಡಿರುವ ಫಲವಾಗಿ ಅಧಿಕ ಏರಿಳಿತದ ಟ್ರೇಡಿಂಗ್ ಮತ್ತು ಊಹಾತ್ಮಕ ನಡವಳಿಕೆಗಳಿಂದ ಮಾರುಕಟ್ಟೆಯನ್ನು ಸ್ಥಿರಗೊಳಿಸಲು ಸಾಧ್ಯವಾಗುತ್ತದೆ ಎಂದು ವಿಶ್ಲೇಷಣೆಕಾರರ ನಂಬಿಕೆ.ಸಣ್ಣ–ಪುಟ್ಟ ಹೂಡಿಕೆದಾರರನ್ನು ರಕ್ಷಿಸುವುದು ಮತ್ತು ಮಾರುಕಟ್ಟೆ ಸಮಗ್ರತೆಯನ್ನು ಎತ್ತಿಹಿಡಿಯುವುದು ಸೆಬಿ ಕೈಗೊಂಡಿರುವ ಕ್ರಮಗಳ ಹಿಂದಿನ ಉದ್ದೇಶ.

**ಬಾಟಮ್‌ಲೈನ್:** ಎಫ್&ಓ ಟ್ರೇಡಿಂಗ್ ಮಾಡುವುದರಿಂದ ಏಕಾಏಕಿ ಸಂಪತ್ತು ಗಳಿಸಬಹುದು ಎಂಬ ತಪ್ಪು ಗ್ರಹಿಕೆ ಅವಾಸ್ತವಿಕವಾದುದು ಮಾತ್ರವಲ್ಲದೆ ಅಪಾಯಕಾರಿ ಕೂಡ. ಇದರಿಂದಾಗಿ ಮನಸೋಯಿಚ್ಛೆ ಟ್ರೇಡಿಂಗ್ ಮಾಡಲು ಉತ್ತೇಜನ ನೀಡಬಹುದು ಮತ್ತು ಅದರಿಂದ ಭಾರೀ ಪ್ರಮಾಣದ ಹಣಕಾಸು ನಷ್ಟಕ್ಕೆ ಕಾರಣವಾಗಬಹುದು.ಸೆಬಿ ಕೈಗೊಂಡಿರುವ ಅಧ್ಯಯನದ ಪ್ರಕಾರ ಎಫ್&ಓ ಮಾರುಕಟ್ಟೆಯಲ್ಲಿ ವೈಯಕ್ತಿಕ ಟ್ರೇಡರ್‌ಗಳು ಕಳೆದ ಮೂರು ವರ್ಷಗಳ ಅವಧಿಯಲ್ಲಿ 1.8ಲಕ್ಷ ಕೋಟಿ ರೂ.ಒಟ್ಟು ನಷ್ಟ ಮಾಡಿಕೊಂಡಿದ್ದಾರೆ ಎಂಬುದು ಸಾಬೀತಾಗುತ್ತದೆ.ಯುವ ಟ್ರೇಡರ್‌ಗಳ ಪೈಕಿ ಮತ್ತು ಬಿ30 ನಗರಗಳ ವ್ಯಾಪ್ತಿಗಳಲ್ಲಿ ಚಿಲ್ಲರೆ ಟ್ರೇಡಿಂಗ್ ಮಾಡುವವರ ಸಂಖ್ಯೆ ಹೆಚ್ಚಾಗಿದ್ದು ಅವರೆಲ್ಲ ಗಣನೀಯ ನಷ್ಟ ಅನುಭವಿಸಿದ್ದಾರೆ.

ಚಿಲ್ಲರೆ ಹೂಡಿಕೆದಾರರು ತಮ್ಮ ಹಣಕಾಸು ಅಗತ್ಯಗಳು, ರಿಸ್ಕ್‌ಗಳನ್ನು ಸಹಿಸಿಕೊಳ್ಳುವುದನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಬೇಕಾಗಿದೆ. ಇದರಿಂದ ಸಂಕೀರ್ಣ ಮಾರುಕಟ್ಟೆಗೆ ಪ್ರವೇಶ ಮಾಡುವುದಕ್ಕೂ ಮುನ್ನ ನಮ್ಮ ಜ್ಞಾನವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು ಅನಿವಾರ್ಯ. ಮ್ಯುಚ್ಯುಯಲ್ ಫಂಡ್‌ಗಳು ಮತ್ತು ಈಕ್ವಿಟಿ ಹೂಡಿಕೆಗಳು ಅಲ್ಪಾವಧಿ ಗಳಿಕೆಗೆ ಅನುವು ಮಾಡಿಕೊಡದೇ ಇರಬಹುದು. ಆದರೆ ಸುದೀರ್ಘ ಅವಧಿಯ ಹಣಕಾಸು ಸಾಧನೆಗೆ ಇದು ನಿಮ್ಮ ರಹಸ್ಯ ಅಸ್ತ್ರವಾಗಿರುತ್ತದೆ.ಒಟ್ಟಾರೆ ಎಫ್ & ಓ ಎಂಬ ಮಾಯಾ ಜಿಂಕೆಯ ಬೆನ್ನುಹತ್ತಿ ಹೊರಟಾಗ ಎಚ್ಚರಿಕೆ ಅಗತ್ಯ.

# ಹೂಡಿಕೆ ವೇಳೆ ಭಾವನೆಗಳ ಹೊಯ್ದಾಟಕ್ಕೆ ಬೇಕು ಕಡಿವಾಣ



**ಭಯ, ಆತಂಕ, ದುರಾಶೆ, ಹತಾಶೆಗಳಂತಹ ನಮ್ಮ ಭಾವನೆಗಳ ಮೇಲೆ ಹತೋಟಿ ಸಾಧಿಸದೇ ಇದ್ದರೆ ಈ ಹೂಡಿಕೆ, ಷೇರುಪೇಟೆ ಇವೆಲ್ಲ ನಮ್ಮ ಬಾಬತ್ತೇ ಅಲ್ಲ ಎಂಬುದು ನೆನಪಿರಲಿ....**

**ಹೂಡಿಕೆಯ** ಕ್ರಿಯಾಶೀಲ ಜಗತ್ತಿನಲ್ಲಿ ಭಾವನೆಗಳು ನಮ್ಮ ತೀರ್ಪಿನ ಮೇಲೆ ಪರಿಣಾಮ ಬೀರಬಹುದು. ಮೂರು ಅತ್ಯಂತ ನಿರ್ಣಾಯಕ ಪರಿಕಲ್ಪನೆಗಳಾದ ಸಮಯ, ವಾಸ್ತವವಾದ ಮತ್ತು ನಿರಾಶವಾದ ಹೂಡಿಕೆ ಕಾರ್ಯತಂತ್ರಗಳು ಹಾಗೂ ಫಲಿತಾಂಶಗಳ ಮೇಲೆ ಮಹತ್ವದ ಪಾತ್ರವಹಿಸುತ್ತವೆ. ಈ ಅಂಶಗಳನ್ನು ನಾವು ತಿಳಿದುಕೊಳ್ಳುವುದರಿಂದ ಹೆಚ್ಚು ಮಾಹಿತಿಪೂರ್ಣ ಹಾಗೂ ಪರಿಣಾಮಕಾರಿ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

**ಹೂಡಿಕೆಯಲ್ಲಿ ಸಮಯದ ಪಾತ್ರ:** ನಾವು ಮಾಡುವ ಹೂಡಿಕೆಯಲ್ಲಿ ಹೆಚ್ಚು ಶಕ್ತಿಶಾಲಿ ಸಾಧನ ಎಂದರೆ ಸಮಯ. ಹೂಡಿಕೆಯಲ್ಲಿ ಸುದೀರ್ಘ ಕಾಲ ಬದ್ಧತೆ ಹಾಗೂ ಶಿಸ್ತನ್ನು ಕಾಯ್ದುಕೊಳ್ಳುವುದರಿಂದ ಸಂಚಿತ ಲಾಭ ಗಳಿಸಲು ಸಾಧ್ಯವಾಗುತ್ತದೆ ಮತ್ತು ನಿವೃತ್ತಿ, ಮಕ್ಕಳ ಶಿಕ್ಷಣ, ಮನೆ ಖರೀದಿಯಂತಹ ನಿಮ್ಮ ಹಣಕಾಸು ಗುರಿಗಳನ್ನು ಸಾಧಿಸಲು ನೆರವಾಗುತ್ತದೆ. ಒಂದು ಸಾಧಾರಣ ಪ್ರಮಾಣದ ಲಾಭ, ಸಂಚಿತ ಮೊತ್ತದ ಮ್ಯಾಜಿಕ್‌ನಿಂದಾಗಿ ಸಣ್ಣ–ಪುಟ್ಟ ಹೂಡಿಕೆಗಳು ಕೂಡ ಒಂದಷ್ಟು ಕಾಲದ ಬಳಿಕ ಸಾಕಷ್ಟು ಸಂಪತ್ತನ್ನು ಸೃಷ್ಟಿಸಬಲ್ಲದು. ಹೂಡಿಕೆಯನ್ನು ಎಷ್ಟು ಬೇಗ ಆರಂಭಿಸುತ್ತೀರೋ ಅಷ್ಟು ಬೇಗ ನಿಮ್ಮ ಹಣ ಕಂಪೌಂಡ್ ಸ್ವರೂಪ ಪಡೆಯಲು ಸಹಾಯವಾಗುತ್ತದೆ. ಮಾರುಕಟ್ಟೆಯಲ್ಲಿ ಕುಸಿತ ಉಂಟಾದಾಗ ಕಾಲದಲ್ಲಿ ಹೂಡಿಕೆಯನ್ನು ಮಾಡಿ ಅದರ ಸಂಭನೀಯ ಏರಿಕೆ ಸಂದರ್ಭದಲ್ಲಿ ಲಾಭ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

**ವಾಸ್ತವವಾದದ ಮಹತ್ವ:** ಹೂಡಿಕೆಯಲ್ಲಿ ಭಾವನಾತ್ಮಕ ಪ್ರಚೋದನೆ ಅಥವಾ ತಳಬುಡವಿಲ್ಲದ ನಂಬಿಕೆಯ ಬದಲಾಗಿ ಸಂಶೋಧನೆ ಮತ್ತು ವಿಶ್ಲೇಷಣೆಯ ಮೂಲಕ ವಾಸ್ತವದ ಅರಿವಿನೊಂದಿಗೆ ಹೂಡಿಕೆಯನ್ನು ಮಾಡುವುದರಿಂದ ಲಾಭದ ಹಾದಿಯಲ್ಲಿ ಸಾಗಬಹುದು.

ವಾಸ್ತವವಾದದ ಪರಿಕಲ್ಪನೆಯ ಆಳ–ಅಗಲವನ್ನು ಅರಿತು ಹೂಡಿಕೆ ನಿರ್ಧಾರಗಳ ಮೇಲೆ ಅದರ ಪ್ರಭಾವ ಏನು ಎಂಬುದನ್ನು ನೋಡೋಣ.

- **ಅಲ್ಪಾವಧಿ ಟ್ರೆಂಡಿಗೆ ಅಥವಾ ಗೀಳಿಗೆ ಗಮನ ಕೊಡದಿರಿ:** ಅನೇಕ ಮಂದಿ ಹೂಡಿಕೆದಾರರು ಫಟಾಫಟ್ ಶ್ರೀಮಂತರಾಗಬೇಕು ಎನ್ನುವ ಯೋಚನೆಯನ್ನು ತಲೆಗೆ ಹಾಕಿಕೊಂಡಿರುತ್ತಾರೆ. ಅಂತಹ ಯೋಚನೆಯಿಂದ ಕೆಟ್ಟ ನಿರ್ಧಾರ ಕೈಗೊಳ್ಳಲು ದಾರಿಮಾಡಿಕೊಡುತ್ತದೆ. ಅದಕ್ಕೆ ಬದಲಾಗಿ ವಾಸ್ತವದ ನೆಲೆಗಟ್ಟಿನಲ್ಲಿ ಯೋಚನೆ ಮಾಡಿದರೆ ಸುದೀರ್ಘಾವಧಿ ಹಣಕಾಸು ಉದ್ದೇಶಗಳ ಕಡೆಗೆ ಗಮನ ಹರಿಸಬಹುದು ಮತ್ತು ವದಂತಿಗಳ ಆಧಾರದಲ್ಲಿ ನಿರ್ಧಾರ ಕೈಗೊಳ್ಳುವುದನ್ನು ತಪ್ಪಿಸಬಹುದು.
- **ರಿಸ್ಕ್ ನಿರ್ವಹಣೆ:** ಹೂಡಿಕೆದಾರರು ವಾಸ್ತವವಾದಿಗಳಾಗಿ ತೀರ್ಮಾನ ಕೈಗೊಳ್ಳುವುದರಿಂದ ರಿಸ್ಕ್ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು. ರಿಸ್ಕ್ ನಾನಾ ಭಾಗಗಳಿಗೆ ವಿಸ್ತರಣೆಯಾಗಲು ಸೂಕ್ತ ರೀತಿಯಲ್ಲಿ ಬಂಡವಾಳ ವಿತರಣೆ ಮಾಡುವುದು, ನಷ್ಟ–ತಡೆಗೆ ಆರ್ಡರ್‌ಗಳನ್ನು ಮಾಡುವುದು, ಮಾರುಕಟ್ಟೆ ಟ್ರೆಂಡ್‌ಗಳ ಬಗ್ಗೆ ಮಾಹಿತಿಪೂರ್ಣ ನಿರ್ಧಾರ ಕೈಗೊಳ್ಳುವುದರಿಂದ ರಿಸ್ಕ್ ನಿರ್ವಹಣೆ ಸುಲಭವಾಗುತ್ತದೆ.
- **ಮಾರುಕಟ್ಟೆ ಗದ್ದಲದ ಬಗ್ಗೆ ನಿರ್ಲಕ್ಷ್ಯ:** ವಾಸ್ತವದ ನೆಲೆಗಟ್ಟಿನಲ್ಲಿ ಯೋಚನೆ ಮಾಡುವ ಹೂಡಿಕೆದಾರರು ಮಾರುಕಟ್ಟೆಯಲ್ಲಿ ಆಗುವ ಅಲ್ಪಾವಧಿಯ ಏರುಪೇರುಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ತಮ್ಮ ಹೂಡಿಕೆಗಳಲ್ಲಿರುವ ನಿಜವಾದ ಮೌಲ್ಯಗಳ ಬಗ್ಗೆ ಗಮನ ಹರಿಸುತ್ತಾರೆ. ಅವರು ದಿನನಿತ್ಯದ ಮಾರುಕಟ್ಟೆ ಚಲನೆಯ ಬಗ್ಗೆ ಆತುರದ ತೀರ್ಮಾನ ಕೈಗೊಳ್ಳುವುದಿಲ್ಲ.

● **ಭಯ–ದುರಾಸೆಯನ್ನು ಮೀರುವುದು:** ವಾಸ್ತವವಾದಿ ಹೂಡಿಕೆದಾರರು ಭಯ ಅಥವಾ ದುರಾಸೆಗೆ ಕಟ್ಟುಬಿದ್ದು ಹೂಡಿಕೆ ನಿರ್ಧಾರ ಕೈಗೊಳ್ಳುವುದಿಲ್ಲ. ತಾರ್ಕಿಕವಾದ ವಿಶ್ಲೇಷಣೆಯ ಆಧಾರದಲ್ಲಿ ಹೂಡಿಕೆ ಆಯ್ಕೆಗಳನ್ನು ಮಾಡಿಕೊಳ್ಳುತ್ತಾರೆ. ಮಾರುಕಟ್ಟೆ ಏರಿಳಿತಕ್ಕೆ ಭಾವನಾತ್ಮಕವಾಗಿ ಸ್ಪಂದಿಸಲು ಹೋಗುವುದಿಲ್ಲ.

ಹೂಡಿಕೆದಾರರು ಮಾರುಕಟ್ಟೆಯಲ್ಲಿರುವ ವಾಸ್ತವದ ಪರಿಸ್ಥಿತಿಗೆ ತಕ್ಕಂತೆ ಈಕ್ವಿಟಿ ಹೂಡಿಕೆ ನಿರ್ಧಾರ ಕೈಗೊಳ್ಳುವ ಸಂದರ್ಭ ಬಂದಾಗ ಆಗುವ ಅನುಕೂಲ ಮತ್ತು ಅನನಕೂಲದ ಬಗ್ಗೆ ಎಚ್ಚರಿಕೆಯಿಂದ ಇರುತ್ತಾರೆ. ಎದುರಾಗಬಹುದಾದ ರಿಸ್ಕ್‌ಗೆ ತಕ್ಕುನಾದ ಕಾರ್ಯತಂತ್ರವನ್ನು ರೂಪಿಸುತ್ತಾರೆ. ಸಮಯದ ಬಗ್ಗೆ ಸೂಕ್ತ ಗಮನ ನೀಡುತ್ತಾರೆ. ಇಂತಹ ವಾಸ್ತವಿಕ ನಿಲುವುಗಳಿಂದ ಮಾರುಕಟ್ಟೆ ಏರಿದಾಗಲೂ ತಗ್ಗಿದಾಗಲೂ ದೃತಿಗೆಡುವುದಿಲ್ಲ.

● **ನಿರಾಶಾವಾದದ ಖೆಡ್ಡ:** ಹೂಡಿಕೆಯಲ್ಲಿ ನಿರಾಶಾವಾದ ಮಾರುಕಟ್ಟೆಯ ಮೇಲೆ ಅಥವಾ ನಿರ್ದಿಷ್ಟ ಆಸ್ತಿಯ ಮೇಲೆ ಋಣಾತ್ಮಕ ನೋಟ ಬೀರುವಂತೆ ಮಾಡುತ್ತದೆ. ಇದರಿಂದ ಷೇರಿನ ಬೆಲೆ ಕುಸಿಯಲಿದೆ ಅಥವಾ ಅದರ ನಿರ್ವಹಣೆ ಕಳೆಗುಂದಲಿದೆ ಎಂಬ ನಂಬಿಕೆಯೇ ಮನಸ್ಸಿನಲ್ಲಿ ಸ್ಥಾಯಿಯಾಗಲಿದೆ. ನಿರಾಶಾವಾದಿ ಹೂಡಿಕೆದಾರರು ಯಾವತ್ತೂ ನಷ್ಟದ ಬಗ್ಗೆ ಅಥವಾ ಮಾರುಕಟ್ಟೆಯ ಕುಸಿತದ ಬಗ್ಗೆ ಯೋಚಿಸುತ್ತಿರುತ್ತಾರೆ. ಇದರ ಪರಿಣಾಮ ಏನೆಂದರೆ ಅವರು ಇಡುವ ಪ್ರತಿಯೊಂದು ಹೆಜ್ಜೆಯೂ ಭಯದಿಂದ ಕೂಡಿರುತ್ತದೆ. ಇದು ಅವರು ಮಾಡುವ ಹೂಡಿಕೆಯ ಮೇಲೆ ಪರಿಣಾಮ ಬೀರುವುದು ನಿಶ್ಚಿತ. ಸಂಭವನೀಯ ಕುಸಿತ ಮತ್ತು ಎದುರಾಗುವ ಅಪಾಯಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕಾದುದು ಮುಖ್ಯವಾದರೂ ಕೂಡ ಅತಿ ಎನ್ನುವಷ್ಟು ನಿರಾಶಾವಾದ ಹೂಡಿಕೆಯ ಯಶಸ್ಸಿಗೆ ಕಡಿವಾಣ ಹಾಕುತ್ತದೆ.

ನಮ್ಮ ಹೂಡಿಕೆ ನಿರ್ಧಾರಗಳ ಮೇಲೆ ನಿರಾಶಾವಾದದ ನಿಲುವು ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಇನ್ನಷ್ಟು ವಿಸ್ತಾರವಾಗಿ ಗಮನ ಹರಿಸೋಣ:

● **ರಿಸ್ಕಿ ಅಸೆಟ್‌ಗಳಿಂದ ದೂರ:** ನಿರಾಶಾವಾದಿ ಮನೋಭಾವದಿಂದ ಈಕ್ವಿಟಿಗಳಂತಹ ಅಪಾಯಕಾರಿಯಾಗಬಹುದಾದ ಆಸ್ತಿ ವರ್ಗಗಳಿಂದ ದೂರ ಇರುವಂತೆ ಮಾಡುತ್ತದೆ. ಆದರೆ ಈಕ್ವಿಟಿಗಳು ಸುದೀರ್ಘಾವಧಿಯಲ್ಲಿ




ಅಧಿಕ ಲಾಭವನ್ನು ತರುವುದು ಸರ್ವವಿಧಿತ ಎಂಬುದು ಐತಿಹಾಸ.

● **ಮಾರುಕಟ್ಟೆ ಸಮಯದ ನಿರೀಕ್ಷೆ:** ಮಾರುಕಟ್ಟೆಯಲ್ಲಿ ಇನ್ನೇನು ಇಳಿಕೆ ಉಂಟಾಗಲಿದೆ, ಆಗ ಖರೀದಿ ಮಾಡಿ ಏರಿದಾಗ ಮಾರಾಟ ಮಾಡಿದರಾಯಿತು ಎಂದು ಕಾದು ಕುಳಿತರೆ ಅದಕ್ಕೆ ಅಂತ್ಯ ಅನ್ನುವುದೇ ಇರುವುದಿಲ್ಲ. ಅಂತಹುದೊಂದು ಸಮಯ ಬರುವ ಹೊತ್ತಿಗೆ ಅನೇಕ ಗಳಿಕೆಗಳನ್ನು ತಪ್ಪಿಸಿಕೊಳ್ಳುವುದು ನಿಶ್ಚಿತ. ನಿರಾಶಾವಾದ ಮನಸ್ಸಿನಲ್ಲಿ ಹೊಕ್ಕು ಕುಂತರೆ ಮಾರುಕಟ್ಟೆ ಕುಸಿದಾಗಲೂ ಅದು ಎದ್ದು ಬರುವುದಿಲ್ಲ. ಸುದೀರ್ಘಾವಧಿ ಲಾಭದ ಅವಕಾಶವಿದ್ದಾಗಲೂ ಹಿಂದಕ್ಕೆ ಜಗ್ಗುವಂತೆ ಮಾಡುತ್ತದೆ.

● **ಇಳಿಕೆಯ ಕಾಲದಲ್ಲಿ ಮಾರಾಟ:** ನಿರಾಶಾವಾದಿ ಹೂಡಿಕೆದಾರರು ಮಾರುಕಟ್ಟೆ ಇಳಿಕೆ ಇರುವ ಸಂದರ್ಭದಲ್ಲಿ ಭಯಕ್ಕೆ ಬಿದ್ದು ಮಾರಾಟ ಮಾಡುವ ಸಾಧ್ಯತೆ ಕೂಡ ಇರುತ್ತದೆ. ಹಾಗೆ ಮಾಡುವುದರಿಂದ ನಷ್ಟಕ್ಕೆ ಕಡಿವಾಣ ಹಾಕಬಹುದು ಎಂಬುದು ಅವರ ಅಂದಾಜು.

ಮಾರುಕಟ್ಟೆಯಲ್ಲಿ ಯಾವತ್ತೂ ಸಮತೋಲಿತವಾದ ದೃಷ್ಟಿಕೋನವನ್ನು ಹೊಂದಿರಬೇಕು. ಭಯ ಸವಾರಿ ಮಾಡದಂತೆ ಎಚ್ಚರಿಕೆ ವಹಿಸಬೇಕು.

**ಬಾಟಮ್ ಲೈನ್:** ಹೂಡಿಕೆಯ ಜಗತ್ತಿನಲ್ಲಿ ವಾಸ್ತವವಾದ ಮತ್ತು ನಿರಾಶಾವಾದ ಒಂದಕ್ಕೊಂದು ತಳಕು ಹಾಕಿಕೊಂಡಿದೆ. ಅದು ಹೂಡಿಕೆದಾರರ ಯಶಸ್ಸಿನ ಮೇಲೆ ಗಮನೀಯವಾದ ಪರಿಣಾಮವನ್ನು ಬೀರಬಲ್ಲುದು. ಹಾಗಾಗಿ ನಿರಾಶಾವಾದ ಮತ್ತು ಆಶಾವಾದದ ನಡುವೆ ಆರೋಗ್ಯಪೂರ್ಣ ಅಂತರವಿರುವುದು ಮುಖ್ಯ. ಮಹತ್ವಾಕಾಂಕ್ಷೆ ನಿಮ್ಮಲ್ಲಿರುವ ಉತ್ಸಾಹವನ್ನು ಇಮ್ಮಡಿಗೊಳಿಸಬಹುದು. ಆದರೆ ಅದೂ ಕೂಡ ವಾಸ್ತವದ ತಳಗಟ್ಟಿನ ಮೇಲೆ ನಿಂತಿರಬೇಕು ಮತ್ತು ಸಂಭವನೀಯ ರಿಸ್ಕ್‌ಗಳನ್ನೂ ಕೂಡ ಮಾನ್ಯಮಾಡಬೇಕು. ಆರೋಗ್ಯಪೂರ್ಣ ಹೂಡಿಕೆಯ ದೃಷ್ಟಿಯಿಂದ ಅತಿಯಾದ ಮಹತ್ವಾಕಾಂಕ್ಷೆಯೂ ಅತಿಯಾದ ನಿರಾಶಾವಾದವೂ ಒಳ್ಳೆಯದಲ್ಲ. ಹಾಗಾಗಿ ಉತ್ತಮ ವಿಶ್ಲೇಷಣೆಯ ಆಧಾರದಲ್ಲಿ ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳುವುದು ಶ್ರೇಯಸ್ಕರ. ಹಾಗೆ ಮಾಡಬೇಕಾದರೆ ಮಾರುಕಟ್ಟೆಗೆ ಸಂಬಂಧಿಸಿದ ಸುದ್ದಿಗಳ ಮೇಲೆ ಕಣ್ಣಿಡಬೇಕು, ಆರ್ಥಿಕ ಸೂಚ್ಯಂಕಗಳನ್ನು ಗಮನಿಸಬೇಕು, ಉದ್ಯಮದ, ಕೈಗಾರಿಕೆಯ ಟ್ರೆಂಡ್ ಎತ್ತ ಸಾಗಿದೆ ಎಂಬ ಬಗ್ಗೆ ಚಿತ್ತ ಹರಿಸಬೇಕು.

ಸಮಯ ನಿಮ್ಮ ಮಿತ್ರ, ವಾಸ್ತವವಾದ ಅತ್ಯಗತ್ಯ, ಅತಿಯಾದ ನಿರಾಶಾವಾದ ಒಳ್ಳೆಯದಲ್ಲ– ಇಂತಹ ಸಿದ್ಧಾಂತವನ್ನು ಅಳವಡಿಸಿಕೊಂಡರೆ ಹೂಡಿಕೆ ಜಗತ್ತಿನ ಸಂಕೀರ್ಣತೆಗಳಿಂದ ತಪ್ಪಿಸಿಕೊಳ್ಳಬಹುದು. ನಿಮ್ಮ ಹಣಕಾಸು ಅಗತ್ಯಗಳಿಗೆ ತಕ್ಕಂತೆ ಮಾಹಿತಿಪೂರ್ಣ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಅಷ್ಟಕ್ಕೂ ನಿಮ್ಮ ಹೂಡಿಕೆ ಕಾರ್ಯತಂತ್ರದ ಬಗ್ಗೆ ಖಾತರಿ ಇಲ್ಲದೇ ಹೋದರೆ ವೈಯಕ್ತಿಕ ಮಾರ್ಗದರ್ಶಕ್ಕಾಗಿ ಹಣಕಾಸು ಸಲಹೆಗಾರರನ್ನು ಸಂಪರ್ಕಿಸುವುದು ಉತ್ತಮ.

# ನಿಮಗಿದು ತಿಳಿದಿರಲಿ

## ಪರಿಪೂರ್ಣ ಕಾರ್ ವಿಮೆಯ ಸಂಪೂರ್ಣ ಗುಟ್ಟು



**ಕಾರನ್ನು** ಖರೀದಿ ಮಾಡಿದ ಬಳಿಕ ನಿಮ್ಮ ಜವಾಬ್ದಾರಿಗಳು ಮುಗಿದು ಹೋಗುವುದಿಲ್ಲ. ಅದಕ್ಕೊಂದು ಸಮಗ್ರ ವಿಮೆ ಮಾಡಿದಾಗಲಷ್ಟೇ ಎಲ್ಲ ರೀತಿಯ ಅಪಘಾತಗಳಿಂದಲೂ ರಕ್ಷಣೆ ದೊರೆಯುತ್ತದೆ.ಕಾರು ಮಾಲೀಕತ್ವದ ಜವಾಬ್ದಾರಿ ಪಾಲಿಸಿದಂತಾಗುತ್ತದೆ.ಈ ಸಮಗ್ರ ಕಾರು ವಿಮೆಯಲ್ಲಿರುವ ವಿಶೇಷತೆಗಳು, ಪ್ರಯೋಜನಗಳು ಏನು ಎಂಬುದನ್ನು ನೋಡೋಣ. ಇದರಿಂದ ಮಾಹಿತಿಪೂರ್ಣ ನಿರ್ಧಾರಗಳನ್ನು ನೀವು ಕೈಗೊಳ್ಳಲು ಸಾಧ್ಯವಾಗುತ್ತದೆ ಮತ್ತು ಯಾವುದೇ ಅಂಜಿಕೆ ಇಲ್ಲದೆ ಡ್ರೈವ್ ಮಾಡಿಕೊಂಡು ಹೊರಟು ಬಿಡಬಹುದು.

ಸಮಗ್ರ ಕಾರ್ ವಿಮೆಯಲ್ಲಿ ಸಾಮಾನ್ಯವಾಗಿ ಈ ಎಲ್ಲ ಅಂಶಗಳು ಒಳಗೊಂಡಿರುತ್ತವೆ:

**ಪ್ರಾಕೃತಿಕ ವಿಕೋಪಗಳು:** ಭೂಕಂಪ, ಪ್ರವಾಹ ಮತ್ತು ಚಂಡಮಾರುತದಂತಹ ದುರಂತಗಳು ಸಂಭವಿಸಿದರೆ ಉಂಟಾಗುವ ಹಾನಿಗೆ ರಕ್ಷಣೆ ದೊರೆಯುತ್ತದೆ.

**ಕಳ್ಳತನ ಮತ್ತು ಪುಂಡಾಟಿಕೆ:** ಕಳ್ಳರಿಂದ ಅಥವಾ ಪುಂಡಾಟಿಕೆಯಿಂದ ವಾಹನಕ್ಕೆ ಉಂಟಾಗುವ ನಷ್ಟವನ್ನು ತುಂಬಿಕೊಡುವ ಸೌಲಭ್ಯ.

**ಪ್ರಾಣಿಗಳಿಗೆ ಡಿಕ್ಕಿ:** ನಿಮ್ಮ ವಾಹನ ಯಾವುದಾದರೂ ಪ್ರಾಣಿಗಳಿಗೆ ಡಿಕ್ಕಿ ಹೊಡೆದು ಹಾನಿ ಸಂಭವಿಸಿದರೆ.

**ಥರ್ಡ್ ಪಾರ್ಟಿ ಭಾದ್ಯತೆ:** ಉಳಿದವರ ಆಸ್ತಿ–ಪಾಸ್ತಿಗೆ ನಿಮ್ಮ ವಾಹನದಿಂದ ಹಾನಿ ಸಂಭವಿಸಿದರೆ ಅಥವಾ ಇತರರಿಗೆ ನಷ್ಟ ಉಂಟಾದರೆ.

**ಬೆಂಕಿ:** ಅಗ್ನಿ ಅವಘಡದಿಂದ ವಾಹನಕ್ಕೆ ಉಂಟಾಗುವ ಹಾನಿಯಿಂದ ರಕ್ಷಣೆ.

**ಗಲಭೆ ಮತ್ತು ಮುಷ್ಕರ:** ಜನರು ನಡೆಸುವ ಮುಷ್ಕರದ ಸಂದರ್ಭದಲ್ಲಿ ವಾಹನಕ್ಕೆ ಉಂಟಾದ ಹಾನಿಗೆ ಭದ್ರತೆ.

ಈ ಎಲ್ಲ ಮುಖ್ಯ ಸೌಲಭ್ಯಗಳ ಹೊರತಾಗಿಯೂ ಸಮಗ್ರ ಕಾರ್ ವಿಮೆ ಈ ಕೆಳಗಿನ ಅಂಶಗಳನ್ನು ಕೂಡ ಒಳಗೊಂಡಿರುತ್ತದೆ.

**ಪೂರ್ತಿ ಖರೀದಿ ಬೆಲೆ:** ಒಂದು ವೇಳೆ ಸಂಪೂರ್ಣ ನಷ್ಟ ಸಂಭವಿಸಿದರೆ ಯಾವುದೇ ಸವಕಳಿ ಇಲ್ಲದೆ ಪೂರ್ತಿ ಖರೀದಿ ಬೆಲೆಯನ್ನು ಪಡೆಯುವ ಖಾತರಿ. ಈ ಪ್ರಯೋಜನವು ಸಾಮಾನ್ಯವಾಗಿ ಹೊಸ ಹಾಗೂ ಅಧಿಕ ಮೌಲ್ಯದ ವಾಹನಗಳಿಗೆ ಒದಗಿಸಲಾಗುತ್ತದೆ.ಈ ಆ್ಯಡ್–ಆನ್‌ನ್ನು ವಾಹನಕ್ಕೆ ಮೂರು ವರ್ಷಗಳಾಗುವ ತನಕ ನೀಡಲಾಗುತ್ತದೆ.ಈ ಸೌಲಭ್ಯವು ವಿಮಾ ಕಂಪನಿ, ಕ್ಲೈಮ್ ಅನುಭವ ಮತ್ತು ವಾಹನದ ನಿರ್ಮಾಣ, ಮಾಡೆಲ್‌ಗೆ ಅನುಗುಣವಾಗಿ ಬದಲಾಗಬಹುದು.

**ಶೂನ್ಯ ಸವಕಳಿ:** ರಿಪೇರಿ ಅಥವಾ ಬಿಡಿಭಾಗಗಳ ಬದಲಾವಣೆಗೆ ಸವಕಳಿ ಶುಲ್ಕವನ್ನು ವಿಧಿಸಲಾಗುವುದಿಲ್ಲ. ಇದರಿಂದ ನಿಮ್ಮ ಕೈಯಿಂದ ತಗಲುವ ವೆಚ್ಚವನ್ನು ಗಣನೀಯವಾಗಿ ತಗ್ಗಲಿದೆ. ಅದರಲ್ಲೂ ಮುಖ್ಯವಾಗಿ ಹಳೆಯ ವಾಹನಗಳಿಗೆ ಇದರಿಂದ ಅನುಕೂಲವಾಗಲಿದೆ.ವಾಹನಕ್ಕೆ ಐದು ವರ್ಷ ಆಗುವ ತನಕ ಈ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.ಆದರೆ ಇದೂ ಕೂಡ ವಿಮಾ ಕಂಪನಿ, ಕ್ಲೈಮ್ ಅನುಭವ ಮತ್ತು ವಾಹನದ ನಿರ್ಮಾಣ, ಮಾಡೆಲ್‌ಗೆ ಅನುಗುಣವಾಗಿ ಬದಲಾಗಬಹುದು.

**ಎಂಜಿನ್‌ಗೆ ಸುರಕ್ಷತೆ:** ಈ ಸೌಲಭ್ಯದಲ್ಲಿ ಅಪಘಾತದಿಂದ ಎಂಜಿನ್‌ನಲ್ಲಿ ನೀರು ಸೇರಿಕೊಂಡರೆ ಅಥವಾ ತೈಲ ಸೋರಿಕೆಯಾದರೆ ನಿಮ್ಮ ವಾಹನದ ಎಂಜಿನ್‌ಗೆ ಭದ್ರತೆಯನ್ನು ಒದಗಿಸಲಿದೆ. ಹೊಸ ಅಥವಾ ಅಧಿಕ ನಿರ್ವಹಣೆ ತೋರುವ ವಾಹನಗಳಲ್ಲಿ ಎಂಜಿನ್ ದುರಸ್ಥಿ ದುಬಾರಿಯಾಗಿ ಪರಿಣಮಿಸುವುದರಿಂದ ಈ ಸೌಲಭ್ಯದಿಂದ ಲಾಭವಾಗಲಿದೆ. ಸಾಮಾನ್ಯವಾಗಿ ಈ ಆ್ಯಡ್–ಆನ್ ಐದು ವರ್ಷಗಳ ವಾಹನಗಳಿಗೆ ಮಾತ್ರ ನೀಡಲಾಗುತ್ತದೆ.ಆದಾಗ್ಯೂ ಇದು ವಿಮಾ ಕಂಪನಿ, ಕ್ಲೈಮ್ ಅನುಭವ ಮತ್ತು ವಾಹನದ ನಿರ್ಮಾಣ, ಮಾಡೆಲ್‌ಗೆ ಅನುಗುಣವಾಗಿ ಬದಲಾಗಬಹುದು.

**ವೈಯಕ್ತಿಕ ಅಪಘಾತ ಸೌಲಭ್ಯ:** ಅಪಘಾತದಿಂದ ಚಾಲಕ ಮತ್ತು ಪ್ರಯಾಣಿಕ–ರಿಗೆ ಗಾಯ ಅಥವಾ ಸಾವು ಸಂಭವಿಸಿದರೆ ವಿಮಾ ಕವರೇಜ್ ಲಭ್ಯ.

ತುರ್ತು ನೆರವು: ವಾಹನಗಳನ್ನು ಟೋವ್ ಮಾಡಿ ಕೊಂಡೊಯ್ಯುವುದು, ಬ್ಯಾಟರಿ ಜಾಮ್ ಆಗಿ ಚಾಲನೆ ಆಗದೇ ಇರುವುದು ಮತ್ತು ಟಯರ್ ಬದಲಾವಣೆಯಂತಹ ಸೇವೆಗಳು.

**ಪ್ರೀಮಿಯಂ ಮೇಲೆ ಪರಿಣಾಮ ಬೀರುವ ಅಂಶಗಳು:** ವಾಹನ ನೋಂದಣಿ

ವಲಯವನ್ನು ಹೊರತುಪಡಿಸಿ ಇನ್ನೂ ಅನೇಕ ಸಂಗತಿಗಳು ನಿಮ್ಮ ಪ್ರೀಮಿಯಂ ಮೇಲೆ ಪರಿಣಾಮ ಬೀರಬಹುದು. ಅವುಗಳೆಂದರೆ:

ವಾಹನದ ಮಾಡೆಲ್ ಮತ್ತು ಮೌಲ್ಯ: ಹೊಸ ಹಾಗೂ ದುಬಾರಿ ಮೌಲ್ಯದ ವಾಹನಗಳು ಸಾಮಾನ್ಯವಾಗಿ ಅಧಿಕ ಪ್ರೀಮಿಯಂ ಹೊಂದಿರುತ್ತವೆ. ಅದಕ್ಕಿರುವ ಮೌಲ್ಯ ಮತ್ತು ಅಧಿಕ ರಿಪೇರಿ ವೆಚ್ಚಗಳು ಇದಕ್ಕೆ ಕಾರಣ.

**ಚಾಲನೆಯ ಹಿನ್ನೆಲೆ:** ಉತ್ತಮ ಚಾಲನೆ ರೆಕಾರ್ಡ್ ಕಡಿಮೆ ಪ್ರೀಮಿಯಂಗೆ ದಾರಿ ಮಾಡಿಕೊಡಲಿದೆ. ಯಾಕೆಂದರೆ ಇದು ಸುರಕ್ಷಿತ ಚಾಲನೆಯನ್ನು ಸೂಚಿಸುತ್ತದೆ.ಆದರೆ ಅಪಘಾತ ನಡೆಸಿದ ಹಿನ್ನೆಲೆ ಇದ್ದರೆ ಅದು ಅಧಿಕ ಪ್ರೀಮಿಯಂಗೆ ಕಾರಣವಾಗಬಹುದು.

ಸಮಗ್ರ ಕಾರ್ ವಿಮೆಯನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಸೂಕ್ತ:

**ಸೌಲಭ್ಯದ ಮಿತಿಗಳು:** ನಿಮ್ಮ ಅಗತ್ಯಗಳಿಗೆ ತಕ್ಕಂತೆ ಸೌಲಭ್ಯದ ಮಿತಿಗಳನ್ನು ಆಯ್ಕೆ ಮಾಡಿಕೊಳ್ಳಿ. ನಿಮ್ಮ ವಾಹನದ ಮೌಲ್ಯ ಮತ್ತು ನಿಮ್ಮ ಚಾಲನಾ ಅಭ್ಯಾಸ ಇಲ್ಲಿ ಅನ್ವಯ.

ಗ್ಯಾರೇಜ್‌ಗಳ ಜಾಲ: ವಾಹನದ ರಿಪೇರಿ ಮತ್ತು ನಗದು ರಹಿತ ಇತ್ಯರ್ಥಕ್ಕೆ ಅನುಕೂಲವಾಗುವಂತೆ ವ್ಯಾಪಕ ಗ್ಯಾರೇಜ್‌ಗಳ ಜಾಲವನ್ನು ಪರಿಶೀಲಿಸಿ.



ಗ್ಯಾರೇಜ್‌ಗಳ ನೆಟ್‌ವರ್ಕ್ ಸೌಲಭ್ಯವಿದ್ದರೆ ದೂರ ಹೋಗಬೇಕಾದ ಅಗತ್ಯವಿರುವುದಿಲ್ಲ ಮತ್ತು ಕ್ಲೈಮ್ ಇತ್ಯರ್ಥವೂ ಸುಲಭ.

**ಕ್ಲೈಮ್ ಇತ್ಯರ್ಥದ ಪ್ರಕ್ರಿಯೆ:** ಕ್ಲೈಮ್‌ಗಳನ್ನು ಭರ್ತಿ ಮಾಡುವ ಮತ್ತು ಪರಿಷ್ಕರಿಸುವ ವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. ಸುಗಮ ಮತ್ತು ದಕ್ಷ ಕ್ಲೈಮ್ ಇತ್ಯರ್ಥ–ಪಡಿಸುವ ವಿಮಾದಾರರನ್ನು ಯಾವತ್ತೂ ಆಯ್ಕೆ ಮಾಡಿಕೊಳ್ಳಿ.

**ಗ್ರಾಹಕ ಸೇವೆ:** ಉತ್ತಮ ಗ್ರಾಹಕ ಸೇವೆಗಳನ್ನು ಹೊಂದಿರುವ ವಿಮಾದಾರರನ್ನು ಆಯ್ಕೆ ಮಾಡಿಕೊಳ್ಳಿ. ಜವಬ್ದಾರಿಯುತ ಮತ್ತು ಸಹಾಯ ಮಾಡುವ ಮನೋಭಾವದ ವಿಮಾದಾರರು ಕ್ಲೈಮ್ ಪ್ರಕ್ರಿಯೆ ಯಾವುದೇ ಕಿರಿಕಿರಿಯಿಲ್ಲದೆ ಪೂರೈಸುತ್ತಾರೆ.

**ಪಾಲಿಸಿಯ ನಿರಾಕರಣೆಗಳು:** ನಿಮ್ಮ ಪಾಲಿಸಿ ಸೌಲಭ್ಯದಿಂದ ಯಾವದನ್ನು ಹೊರಗಿಡಲಾಗಿದೆ ಎಂಬುದರ ಕಡೆಗೆ ಗಮನವಿರಲಿ. ಕೆಲವು ರೀತಿಯ ಹಾನಿ ಅಥವಾ ಚಾಲನಾ ಪರಿಸ್ಥಿತಿಗಳು ಕೆಲವು ಪಾಲಿಸಿಗಳಿಂದ ಹೊರಗಿಟ್ಟಿರುವ ಸಾಧ್ಯತೆಗಳಿರುತ್ತವೆ.

**ಬಾಟಮ್‌ಲೈನ್:** ಸಮಗ್ರವಾದ ಕಾರ್ ವಿಮೆ ಮಾಡಿಸುವುದು ನಿಜಕ್ಕೂ ಅತ್ಯಂತ ಮೌಲ್ಯಯುತವಾದ ಹೂಡಿಕೆ. ಅದು ನಿಮ್ಮ ವಾಹನಕ್ಕೆ ಅಗತ್ಯವಿರುವ ರಕ್ಷಣೆಯನ್ನು ಒದಗಿಸುತ್ತದೆ.ಈ ಲೇಖನದಲ್ಲಿ ಪ್ರಸ್ತಾಪ ಮಾಡಲಾದ ಎಚ್ಚರಿಕೆಯಿಂದ ಪರಿಗಣಿಸಿದರೆ ನಿಮ್ಮ ಅಗತ್ಯಗಳಿಗೆ ಬೇಕಾದಂತೆ ಪಾಲಿಸಿಯನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಹಾಗೆ ಮಾಡುವುದರಿಂದ ಅನೇಕ ರಿಸ್ಕ್‌ಗಳಿಂದ ನಿಮಗೆ ರಕ್ಷಣೆ ಸಿಗುತ್ತದೆ. ನೆನಪಿಡಿ, ಸರಿಯಾದ ಸಮಗ್ರ ಕಾರ್ ವಿಮಾ ಪಾಲಿಸಿಯನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಮಾನಸಿಕ ನೆಮ್ಮದಿ ಲಭ್ಯ ಮತ್ತು ರಸ್ತೆಯಲ್ಲಿ ಸಂಚರಿಸುವಾಗ ಹಣ–ಕಾಸು ಭದ್ರತೆಯೂ ಲಭ್ಯ. ಸುರಕ್ಷಿತ ಚಾಲನೆ ನಿಮ್ಮದಾಗಲಿ.


INSPIRE INDIA
WEALTH PVT LTD
ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಹಕ್ಕು ತ್ಯಾಗ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.



ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com